**ದಿನಾಂಕಃ 24/09/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಡಿಹೆಚ್‌ಆರ್ **ಪರ** ಶ್ರೀ ಕೆ.ಎಸ್ **ವಕೀಲರಿಂದಃ**

1. ನನಗೆ ಈ ಪ್ರಕರಣದ ವಿದ್ಯಾಮಾನ ಗೊತ್ತಿಲ್ಲ. ನಾನು ತಕರಾರು ಸಲ್ಲಿಸಿದ್ದೇನೆ. ನಾನು ತಕರಾರಿನಲ್ಲಿ ಈ ಪ್ರಕರಣದ ಬಗ್ಗೆ ಗೊತ್ತಿಲ್ಲ, ಯಾವುದೇ ನೋಟೀಸು ಬಂದಿಲ್ಲ, ತೀರ್ಪಿನ ಬಗ್ಗೆ ಗೊತ್ತಿಲ್ಲ ಎಂದು ತಕರಾರು ಸಲ್ಲಿಸಿದ್ದೇನೆ. ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಅಸಲು ದಾವಾ ಸಂಃ 328/2017 ರ ತೀರ್ಪಿನ ವಿರುದ್ಧ ಮೇಲ್ಮನವಿ ಸಂಃ15/2023 ಸಲ್ಲಿಸಿದ್ದೆ. ಸದರಿ ಮೇಲ್ಮನವಿ ಈಗ ವಜಾಗೊಂಡಿದೆ ಎಂದರೆ ಸರಿ. ಅಸಲು ದಾವಾ ಸಂಃ328/2017 ರಲ್ಲಿ ನಾನು ವಕೀಲರನ್ನು ನೇಮಿಸಿರಲಿಲ್ಲ. ಆದರೆ 1 ನೇ ತೀರ್ಪುಋುಣಿ ವಕೀಲರನ್ನು ನೇಮಿಸಿದ್ದರು. ನಾನು ಸದರಿ ದಾವೆಯಲ್ಲಿ ಎ.ಪ್ರಸನ್ನ ಎಂಬ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತಿನಲ್ಲಿ ತೀರ್ಪುಧಣಿ ಸ್ವಾಧೀನದಲ್ಲಿದ್ದಾರೆ ಮತ್ತು ಅವರದೇ ಸ್ವತ್ತು ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ವಾದಿಯ ಪರ ತೀರ್ಪಾಗಿದ್ದರೂ ಸಹ ದಾವಾಸ್ವತ್ತಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿ ನನ್ನ ವಿರುದ್ಧ ದೂರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಪೊಲೀಸರು ಬಂದಿದ್ದರು ಎಂದು ಗೊತ್ತು, ಆದರೆ ದೂರಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ದಾವಾಸ್ವತ್ತಿನಲ್ಲಿ ತಿಪ್ಪೆ ಹಾಕಿಕೊಂಡು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಬೇಲಿಯ ಜಾಗದಲ್ಲಿ ನಾನು ಸ್ವಾಧೀನ ಇದ್ದೇನೆ. ವಾದಿಯ ಬೇಲಿಯ ಜಾಗದಲ್ಲಿ ಅವರು ಸ್ವಾಧೀನ ಇದ್ದಾರೆ, ಅವರ ಸ್ವತ್ತು ಬೇರೆ ನಮ್ಮ ಸ್ವತ್ತು ಬೇರೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**